ಮುಳವಾಡ ಏತ ನೀರಾವರಿ ಯೋಜನೆ ಬಗ್ಗೆ

೧೦೭೩. ಶ್ರೀ ಎಂ. ಎಲ್. ಉಸ್ತಾದ್ (ಬಿಜಾಪುರ).—ಮಾನ್ಯ ಲೋಕೋಪಯೋಗಿ ಅಚ್ಚು ಕಟ್ಟು ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಿಜಾಪುರ ಜಿಲ್ಲೆಯಲ್ಲಿ ಮುಳವಾಡ ಏತ ನೀರಾವರಿ ಯೋಜನೆಗೆ ಮಾನ್ಯ ಮುಖ್ಯಮಂತ್ರಿ ಯವರು ಅಡಿಗಲ್ಲು ಹಾಕಿರುವುದು ನಿಜವೆ ?

ಆ) ಹಾಗಿದ್ದಲ್ಲಿ ಕೆಲಸವು ಪ್ರಾರಂಭವಾಗಿದೆಯೆ ?

ಇ) ಹಾಗಿದ್ದಲ್ಲಿ, ಇದಕ್ಕೆ ಒದಗಿಸಲ್ಪಟ್ಟ ಹಣವೆಷ್ಟು ?

ಈ) ಕೆಲಸ ಯಾವಾಗ ಪೂರ್ಣಗೊಳ್ಳುವುದು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು

ಆ) ಇಲ್ಲ

ಇ) ಕೃಷ್ಣಾ ಮೇಲ್ದಂಡೆ ಯೋಜನೆಯಡಿಯಲ್ಲಿ ೫–೦೦ ಲಕ್ಷ ರೂ.ಗಳ ಅನುದಾನವನ್ನು ೧೯೮೬–೮೭ನೇ ಸಾಲಿನಲ್ಲಿ ಈ ಏತ ನೀರಾವರಿ ಯೋಜನೆಗೆ ಒದಗಿಸಲಾಗಿದೆ.

ಈ) ಈ ಯೋಜನೆಯ ಸರ್ವೆ ಕಾರ್ಯ ನಡೆದಿದ್ದು ಯೋಜನಾ ವರದಿ ಇನ್ನೂ ತಯಾರಾಗ ಬೇಕಾಗಿದೆ. ಹೆಡ್ ವರ್ಕ್ಸ್ ಕಾಮಗಾರಿಗಳನ್ನು ೧೯೯೦–೯೨ರ ಅವಧಿಯ ವೇಳೆಗೆ ಮುಗಿಸಲು ಉದ್ದೇಶಿಸಲಾಗಿದೆ.

ಬೀಳಗಿ ತಾಲ್ಲೂಕಿನ ಯಾತ ನೀರಾವರಿ ಯೋಜನೆಗಳ ಬಗ್ಗೆ

೧೦೯೦ ಶ್ರೀ ಬಾಬುರೆಡ್ಡಿ ವಿ. ತುಂಗಳ್, (ಬೀಳಗಿ).—ಮಾನ್ಯ ಲೋಕೋಪಯೋಗಿ ಅಚ್ಚು ಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೀಳಗಿ ತಾಲ್ಲೂಕಿನಲ್ಲಿ ಅಸ್ತಿತ್ವದಲ್ಲಿರುವ ಯಾತ ನೀರಾವರಿ ಯೋಜನೆಗಳೆಷ್ಟು ?

ಆ) ಈ ಎಲ್ಲ ಯೋಜನೆಗಳಿಂದ ನೀರಾವರಿಯಾಗುವ ಕ್ಷೇತ್ರ ಎಷ್ಟು ?

ಇ) ಈ ಎಲ್ಲ ಯೋಜನೆಗಳನ್ನು ಯಾವ ಇಲಾಖೆಗೆ ವಹಿಸಿಕೊಡಲಾಗಿದೆ. ಜಿ.ಎಲ್.ಬಿ.ಸಿ. ಯವರಿಗೆ ಎಷ್ಟು ಹಾಗೂ ಚಿಕ್ಕ ನೀರಾವರಿಯವರಿಗೆ ಎಷ್ಟು ?

ಈ) ಬಹುತೇಕ ಯಾತ ನೀರಾವರಿ ಯೋಜನೆಗಳು ಅವ್ಯವಸ್ಥಿತವಾಗಿ ನಡೆದಿರುವುದು ಸರ್ಕಾರ ದವರ ಗಮನಕ್ಕೆ ಬಂದಿದೆಯೆ ?

ಉ) ಹಾಗಿದ್ದಲ್ಲಿ, ಅವುಗಳನ್ನು ಸುವ್ಯವಸ್ಥಿತವಾಗಿ ನಡೆಸಲು ಯಾವ ಕ್ರಮ ಕೈಗೊಳ್ಳಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಒಟ್ಟು ಆರು ಯಾತ ನೀರಾವರಿ ಯೋಜನೆಗಳು ಅಸ್ತಿತ್ವದಲ್ಲಿವೆ.

ಆ) ೧೧೨೩.೫೮ ಹೆಕ್ಟೇರುಗಳು.

ಇ) ಈ ಎಲ್ಲಾ ಆರು ಯಾತ ನೀರಾವರಿ ಯೋಜನೆಗಳು ನೀರಾವರಿ (ಉತ್ತರ) ವಲಯದ ಜಿ.ಎಲ್.ಬಿ.ಸಿ.ಯವರ ಅಧಿನದಲ್ಲಿ ಬರುತ್ತದೆ.